ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-10-1971.

***<u>ಸಂಪೂರ್ಣತೆಯ ಸಂಕೇತ - 16 ಕಲೆಗಳು</u>*** (सम्पूर्णता की निशानी 16 कलायें)

ಎಲ್ಲರ ಪುರುಷಾರ್ಥದ ಲಕ್ಷ್ಯ ಏನಾಗಿದೆ?(ಸಂಪೂರ್ಣರಾಗುವುದು) ಸಂಪೂರ್ಣತೆಯ ಸ್ಥಿತಿಯೆಂದು ಯಾವುದಕ್ಕೆ ಹೇಳಲಾಗುತ್ತದೆ? ಯಾವ ನಕ್ಷೆಯು ನಿಮ್ಮ ಮುಂದಿದೆ ಅದನ್ನು ಸಂಪೂರ್ಣ ಸ್ಥಿತಿಯೆಂದು ತಿಳಿದುಕೊಳ್ಳುತ್ತೀರಿ? ತಂದೆಯು ಯಾವ ಸಂಪೂರ್ಣ ಸ್ಥಿತಿಯನ್ನು ಧಾರಣೆ ಮಾಡಿಕೊಂಡರು, ಅದರಲ್ಲಿ ಯಾವ ವಿಷಯಗಳಿದ್ದವು? ಯಾವಾಗ ಅನ್ಯರಿಗೆ ತಿಳಿಸುತ್ತೀರೋ ಆಗ ಸಂಪೂರ್ಣ ಸ್ಥಿತಿಯ ಏನೇನು ವರ್ಣನೆ ಮಾಡುತ್ತೀರಿ? ಅನ್ಯರಿಗೆ ಇದನ್ನೇ ತಿಳಿಸುತ್ತೀರಲ್ಲವೆ- ಈ ಜ್ಞಾನದ ಮೂಲಕ ನಿರ್ವಿಕಾರಿಗಳಾಗುವಿರಿ ಎಂದು ಸಂಪೂರ್ಣ ಸ್ಥಿತಿಯ ವರ್ಣನೆ ಮಾಡುತ್ತೀರಿ. ಭವಿಷ್ಯದಲ್ಲಂತೂ ಪ್ರಾಪ್ತಿಯಾಗುವುದು. ಆದರೆ ಸಂಪೂರ್ಣ ಸ್ಥಿತಿಯು ಇದೆಯೆಂದು ಹೇಳುತ್ತೀರಲ್ಲವೆ. ಆತ್ಮದಲ್ಲಿ ಬಲವನ್ನು ಈಗಿನಿಂದಲೇ ತುಂಬಿಸಬೇಕಾಗಿದೆ. 16 ಕಲಾ ಸಂಪೂರ್ಣರೆಂದು ಹೇಳುತ್ತಾರೆ ಅಂದಮೇಲೆ ಕಲೆಗಳು ಈಗಿನಿಂದಲೇ ತುಂಬಬೇಕಲ್ಲವೆ. ಸರ್ವಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ, 16 ಕಲಾಸಂಪೂರ್ಣ ಇದೇ ಶಬ್ದಗಳನ್ನು ಹೇಳುತ್ತೀರಲ್ಲವೆ. ಇದೇ ಸಂಪೂರ್ಣ ಸ್ಥಿತಿಯಾಗಿದೆ. ಸರ್ವಗುಣಗಳು ಯಾವುದಾಗಿದೆ ಎಂಬುದನ್ನು ತಿಳಿದುಕೊಂಡಿದ್ದೀರಿ, ಗುಣಗಳ ಪಟ್ಟಿಯಿದೆ ಆದರೆ ಈ 16 ಕಲೆಗಳ ಭಾವಾರ್ಥವೇನಾಗಿದೆ? ಇದೇ ಸಂಪೂರ್ಣ ಸ್ಥಿತಿಯ ಚಿಹ್ನೆಯಾಗಿದೆ. ಉದಾಹರಣೆಗೆ ಯಾರಲ್ಲಿಯಾದರೂ ಯಾವುದೇ ವಿಶೇಷತೆಯಿದ್ದರೆ ಇವರಲ್ಲಿ ಈ ಕಲೆಯಿದೆಯೆಂದು ಹೇಳುತ್ತಾರಲ್ಲವೆ. ಕೆಲವರಲ್ಲಿ ಅಳುವವರನ್ನು ನಗಿಸುವ ಕಲೆ ಅರ್ಥಾತ್ ವಿಶೇಷತೆಯಿರುತ್ತದೆ, ಕೆಲವರಲ್ಲಿ ಕೈಚಳಕದ ಕಲೆ, ಕೆಲವರಲ್ಲಿ ಬುದ್ಧಿಯ ಚಮತ್ಕಾರದ ಕಲೆಯಿರುತ್ತದೆಯಲ್ಲವೆ. ಅಂದಮೇಲೆ ಈ 16 ಕಲಾಸಂಪೂರ್ಣ ಅರ್ಥಾತ್ ಯಾವುದೆಲ್ಲಾ ಕರ್ಮ ಮಾಡುವಿರೋ ಆ ಪ್ರತೀ ಕರ್ಮವು ಕಲೆಯಂತೆ ಕಾಣಿಸುವುದು. ಅವರ ಪ್ರತೀಚಲನೆ, ನೋಡುವುದು, ನಡೆಯುವುದು, ಮಾತನಾಡುವುದು ಕಲೆಯ ರೀತಿಯಲ್ಲಿ ಕಂಡುಬರುವುದು. ಹೇಗೆ ಯಾರದೇ ಕಲೆಯನ್ನು ನೋಡಲು ಎಷ್ಟು ರುಚಿಯಿಂದ ಹೋಗುತ್ತಾರೆ ಹಾಗೆಯೇ ಸಂಪೂರ್ಣ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಂಡಿರುವ ಆತ್ಮರ ಪ್ರತೀಚಲನೆಯು ಕಲೆಯ ರೂಪದಲ್ಲಿರುತ್ತದೆ ಮತ್ತು ಚರಿತ್ರೆಯ ರೂಪದಲ್ಲಾಗುತ್ತದೆ. ಇದು ವಿಶೇಷತೆಯಾಯಿತಲ್ಲವೆ. ಹೇಗೆ ಸಾಕಾರ ಬ್ರಹ್ಮಾತಂದೆಯ ಮಾತನಾಡುವುದು, ನಡೆಯುವುದು ಎಲ್ಲದರಲ್ಲಿಯೂ ವಿಶೇಷತೆಯನ್ನು ನೋಡಿದಿರಿ, ಇದು ಕಲೆಯಾಯಿತಲ್ಲವೆ ಏಳುವ ಕುಳಿತುಕೊಳ್ಳುವ ಕಲೆ, ನಡೆಯುವ ಕಲೆಯಿತ್ತು, ಎಲ್ಲದರಲ್ಲಿ ಭಿನ್ನತೆ ಮತ್ತು ವಿಶೇಷತೆಯಿತ್ತು. ಪ್ರತೀ ಕರ್ಮವನ್ನು ಕಲೆಯ ರೂಪದಲ್ಲಿ ಪ್ರತ್ಯಕ್ಷ ರೂಪದಲ್ಲಿ ನೋಡಿದಿರಿ ಅಂದಮೇಲೆ 16 ಕಲೆಗಳು ಅಂದರೆ ಪ್ರತೀ ಚಲನೆ ಸಂಪೂರ್ಣ ಕಲೆಯ ರೂಪದಲ್ಲಿ ಕಂಡುಬರಲಿ, ಇದಕ್ಕೆ 16 ಕಲಾ ಸಂಪೂರ್ಣ ಎಂದು ಹೇಳುತ್ತಾರೆ. ಸಂಪೂರ್ಣ ಸ್ಥಿತಿಯುಳ್ಳವರ ಚಿಹ್ನೆಗಳು ಇದೇ ಇರುವುದು ಅವರ ಪ್ರತೀ ಕರ್ಮವು ಕಲೆಯ ರೂಪದಲ್ಲಿ ಕಾಣಿಸುವುದು ಅರ್ಥಾತ್ ಅದರಲ್ಲಿ ವಿಶೇಷತೆಯಿರುವುದು. ಇದನ್ನೇ ಸಂಪೂರ್ಣ ಸ್ಥಿತಿಯೆಂದು ಹೇಳಲಾಗುತ್ತದೆ.

16 ಕಲಾ ಸಂಪೂರ್ಣರಾಗುವ ಯಾವ ಲಕ್ಷ್ಯವನ್ನಿಟ್ಟು ಕೊಂಡಿದ್ದೀರಿ, ಅದರ ಸ್ಪಷ್ಟಿಕರಣ ಇದೇ ಆಗಿದೆ ಆದ್ದರಿಂದ ಇದನ್ನು ಪರಿಶೀಲನೆ ಮಾಡಿಕೊಳ್ಳಿ ನನ್ನ ನೋಟದಲ್ಲಿ ಕಲೆಯಿದೆಯೇ? ನನ್ನ ಮಾತಿನಲ್ಲಿ ಕಲೆ ಅರ್ಥಾತ್ ವಿಶೇಷತೆ ತುಂಬಿದೆಯೇ? ವಾಸ್ತವದಲ್ಲಿ ಅವರ ಕಲೆಯೇ ಕೆಟ್ಟುಹೋಯಿತು ಎಂದು ಹೇಳುತ್ತಾರೆ ಅಂದರೆ ಕಲೆಯು ಒಂದು ಒಳ್ಳೆಯ ವಸ್ತುವಾಗಿರುತ್ತದೆ. ಆದ್ದರಿಂದ ಕಲೆ ಕೆಟ್ಟುಹೋಯಿತೆಂದರೆ ಕರ್ಮದಲ್ಲಿ ಆಕರ್ಷಣೆ ಮಾಡುವ ಶಕ್ತಿ ಅರ್ಥಾತ್ ವಿಶೇಷತೆ ಸಮಾಪ್ತಿಯಾಯಿತು ಎಂದರ್ಥ. ಆದ್ದರಿಂದ ನಮ್ಮ ಪ್ರತೀ ಕರ್ಮವು ಕಲೆಯಂತಿದೆಯೇ ಅಥವಾ ಇಲ್ಲವೆ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಬೇಕು. ಯಾವುದೇ ಜಾದೂಗಾರರು ಜಾದೂ ತೋರಿಸುವ ಸಮಯದಲ್ಲಿ ಪ್ರತೀ ಕರ್ಮವನ್ನು ಕಲೆಯ ರೂಪದಲ್ಲಿ ತೋರಿಸುತ್ತಾರೆ. ಹೇಗೆ ನಡೆಯುತ್ತಾರೆ. ಹೇಗೆ ವಸ್ತುವನ್ನು ಎತ್ತುತ್ತಾರೆ, ಎಲ್ಲವನ್ನೂ ಕಲೆಯ ರೂಪದಲ್ಲಿ ನೋಟ್ ಮಾಡುತ್ತಾರೆ. ಹಾಗೆಯೇ ಈ ಸಂಗಮಯುಗ ವಿಶೇಷವಾಗಿ ಕರ್ಮರೂಪಿ

ಕಲೆಯನ್ನು ತೋರಿಸುವ ಯುಗವಾಗಿದೆ. ಸದಾ ಈ ರೀತಿ ಅನುಭವವಾಗಲಿ- ನಾವು ಸ್ಟೇಜಿನ ಮೇಲೆ ಇದ್ದೇವೆ, ಈ ರೀತಿ 16 ಕಲಾ ಸಂಪೂರ್ಣರಾಗ ಬೇಕು. ಯಾರ ಪ್ರತೀ ಕರ್ಮವು ಕಲೆಯ ರೂಪದಲ್ಲಿರುವುದೋ ಅವರ ಪ್ರತೀ ಕರ್ಮ ಅರ್ಥಾತ್ ಗುಣಗಳ ಗಾಯನವಾಗುತ್ತದೆ. ಇದನ್ನೇ ಇನ್ನೊಂದು ಶಬ್ದದಲ್ಲಿ ಪ್ರತೀ ಕರ್ಮವು ಚರಿತ್ರೆಯಂತಿರಲಿ ಎಂದು ಹೇಳಲಾಗುತ್ತದೆ. ಅವರ ಕಲೆಯನ್ನು ನೋಡಿ ಅನ್ಯರಲ್ಲಿಯೂ ಪ್ರೇರಣೆ ಬರುತ್ತದೆ. ಅವರ ಕರ್ಮಗಳೂ ಸಹ ಸೇವೆಯನ್ನು ಮಾಡುತ್ತವೆ. ಹೇಗೆ ಯಾರಾದರೂ ಕಲೆ ತೋರಿಸುತ್ತಾರೆಂದರೆ ಆ ಕಲೆಯು ಸಂಪಾದನೆಗೆ ಸಾಧನವಾಗಿಬಿಡುತ್ತದೆ. ಹಾಗೆಯೇ 16 ಕಲಾ ಸಂಪೂರ್ಣರು ಪ್ರತೀ ಕರ್ಮವನ್ನು ಕಲೆಯ ರೂಪದಲ್ಲಿ ಮಾಡುತ್ತಾರೆ. ಅವರ ಪ್ರತೀ ಕರ್ಮವು ಅಖಂಡ ಸಂಪಾದನೆಯ ಸಾಧನವಾಗಿಬಿಡುತ್ತದೆ ಮತ್ತು ಅನ್ಯರನ್ನು ಆಕರ್ಷಣೆ ಮಾಡುತ್ತದೆ. ಪ್ರತೀ ಕರ್ಮವು ಕಲೆಯ ರೂಪದಲ್ಲಿದ್ದಾಗ ಅವರು ಅಯಸ್ಕಾಂತವಾಗಿಬಿಡುತ್ತಾರೆ. ಈಗಿನ ಕಾಲದಲ್ಲಿ ಯಾವುದೇ ಚಿಕ್ಕಪುಟ್ಟ ಕಲೆಯನ್ನು ತೋರಿಸುವವರೂ ಸಹ ರಸ್ತೆಯಲ್ಲಿ ಹೋಗುತ್ತಾ- ಹೋಗುತ್ತಾ ಕಲೆಯನ್ನು ತೋರಿಸಿದರೂ ಸಹ ಜನ ಸೇರಿಬಿಡುತ್ತಾರೆ. ಇದಂತೂ ಇನ್ನೂ ಶ್ರೇಷ್ಠಕಲೆಯಾಗಿದೆ ಅಂದಮೇಲೆ ನಿಮ್ಮ ಕಲೆಯು ಆತ್ಮರನ್ನು ಆಕರ್ಷಿಸುವುದಿಲ್ಲವೇ? ಈಗ ಇಲ್ಲಿಯವರೆಗೆ ಪರಿಶೀಲನೆ ಮಾಡಿಕೊಳ್ಳಬೇಕಾಗಿದೆ. ಯಾರೆಲ್ಲಾ ಶ್ರೇಷ್ಠಾತ್ಮರಾಗುವರೋ ಅವರ ಪ್ರತೀ ಕರ್ಮದ ಮೇಲೆ ಎಲ್ಲರ ಗಮನವಿರುತ್ತದೆ. ಏಕೆಂದರೆ ಅವರ ಪ್ರತೀ ಕರ್ಮದಲ್ಲಿ ಕಲೆ ತುಂಬಿರುತ್ತದೆ. ಆದ್ದರಿಂದಲೇ ಮಂದಿರಗಳಲ್ಲಿ ಪ್ರತೀ ಕರ್ಮಕ್ಕೆ ಕಲೆಯ ರೂಪದಲ್ಲಿ ಪೂಜೆ ನಡೆಯುತ್ತದೆ. ದೊಡ್ಡ- ದೊಡ್ಡಮಂದಿರಗಳಲ್ಲಿ ದೇವತೆಗಳನ್ನು ಏಳಿಸುವುದರಿಂದ ಹಿಡಿದು ತಿನ್ನಿಸುವ, ಅಭಿಷೇಕ ಮಾಡುವ, ಮಲಗಿಸುವ ಎಲ್ಲಾ ಕರ್ಮಗಳ ದರ್ಶನವಾಗುತ್ತದೆ. ಕೆಲವು ಮಂದಿರಗಳಲ್ಲಿ ಮಾತ್ರವೇ ಎಲ್ಲಾ ಚರಿತ್ರೆಗಳ ದರ್ಶನವಾಗುತ್ತದೆ. ಅದಕ್ಕೆ ಕಾರಣವೇನು? ಏಕೆಂದರೆ ಪ್ರತೀ ಕರ್ಮವನ್ನು ಕಲೆಯ ರೂಪದಲ್ಲಿ ಮಾಡಿದ್ದೀರಿ ಆದ್ದರಿಂದ ನೆನಪಾರ್ಥ ನಡೆಯುತ್ತದೆ. ಸಾಕಾರದಲ್ಲಿ ತಂದೆಯ ಪ್ರತೀ ಕರ್ಮವನ್ನು ನೋಡುವ ರುಚಿ ಏಕೆ ಬರುತ್ತದೆ? ಇಷ್ಟು ವರ್ಷ ಜೊತೆಯಿದ್ದರೂ, ತಿಳಿದುಕೊಂಡಿದ್ದರೂ, ನೋಡಿದ್ದರೂ ಸಹ ಮತ್ತೆ- ಮತ್ತೆ ನೋಡುವ ಆಸಕ್ತಿ ಏಕೆ ಇರುತ್ತದೆ? ಪ್ರತೀ ಕರ್ಮವನ್ನು ನೋಡುವುದನ್ನು ತಪ್ಪಿಸುತ್ತಿರಲಿಲ್ಲ. ಹೇಗೆ ಜಾದೂಗಾರರು ಕಲೆಯನ್ನು ಪ್ರದರ್ಶಿಸುವಾಗ ಒಂದುಮಾತು ನೋಡುವುದನ್ನು ತಪ್ಪಿಸಿದರೆ ಬಹಳಷ್ಟು ತಪ್ಪಿಹೋಯಿತೆಂದು ಅನಿಸುತ್ತದೆ ಏಕೆಂದರೆ ಅವರ ಪ್ರತೀ ಕರ್ಮ ಕಲೆಯಾಗಿದೆ. ಅದೇರೀತಿ ಇಲ್ಲಿಯೂ ಸಹ ಸಾಕಾರತಂದೆಯನ್ನು ನೋಡುವ ಇಚ್ಛೆಯಿರುತ್ತಿತ್ತು- ಬಾಬಾ ಹೇಗೆ ಮಲಗಿದ್ದಾರೆ, ಏನು ಮಾಡುತ್ತಾರೆ ಎಂದು. ಏಕೆಂದರೆ ಮಲಗುವುದರಲ್ಲಿಯೂ ಕಲೆಯಿತ್ತು. ಪ್ರತೀಕರ್ಮದಲ್ಲಿ ಕಲೆಯಿತ್ತು, ಇದನ್ನೇ 16 ಕಲಾ ಸಂಪೂರ್ಣ ಎಂದು ಹೇಳಲಾಗುತ್ತದೆ. ಅಂದಮೇಲೆ ಇಂತಹ ಸ್ಥಿತಿ ಇದೆಯೇ? ಲಕ್ಷ್ಯವಂತೂ ಇದೇ ಸ್ಥಿತಿಯನ್ನು ಪಡೆಯಬೇಕೆಂಬುದೇ ಇದೆಯಲ್ಲವೆ. ಲಕ್ಷ್ಯದಿಂದ ಲಕ್ಷಣಗಳನ್ನು ಧಾರಣೆ ಮಾಡಿಕೊಳ್ಳಬೇಕಾಗುವುದು. ಪ್ರತೀ ಕರ್ಮವು ಕಲೆಯ ರೂಪದಲ್ಲಿ ನಡೆಯುತ್ತಿರಲಿ. ಹೀಗೆ 16 ಕಲಾ ಸಂಪೂರ್ಣರಾದಾಗ ಸರ್ವಗುಣಗಳ ಧಾರಣೆಯು ಸ್ವತಹವಾಗಿ ಆಗುವುದು. ಒಳ್ಳೆಯದು.

ಅವ್ಯಕ್ತ ಮುರಳಿ 05-10-1971.

***<u>ಸಂಪೂರ್ಣತೆಗೆ ಸಂಕೇತ 16 ಕಲೆಗಳು</u>***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜ್ಞಾನದಿಂದ ಸರ್ವ ಗುಣ ಸಂಪನ್ನವಾಗಿ, 16 ಕಲಾ ಸಂಪೂರ್ಣವಾಗಿ, ಸಂಪೂರ್ಣ ನಿರ್ವಿಕಾರಿಯಾಗಿ, ಸಂಪೂರ್ಣ ಸ್ಥಿತಿಗೆ ತಲುಪಿದ್ದೇನೆ.

2. ನನ್ನ ಪ್ರತೀ ನಡವಳಿಕೆ, ಕರ್ಮ, ದೃಷ್ಟಿಯನ್ನು ಕಲಾತ್ಮಕವಾಗಿ ಮಾಡಿಕೊಂಡಿರುವ 16 ಕಲಾ ಸಂಪೂರ್ಣ ಸ್ವರೂಪ.

3. ಸದಾ "ನಾನು ವೇದಿಕೆಯ ಮೇಲೆ ಇದ್ದೇನೆ" ಎಂದು ಅನುಭವ ಮಾಡಿಕೊಂಡು ನನ್ನ ಪ್ರತಿಯೊಂದು ಕರ್ಮವನ್ನು ಚರಿತ್ರೆಯ ಸಮಾನವಾಗಿಟ್ಟುಕೊಂಡು ಅಖಂಡ ಸಂಪಾದನೆಯನ್ನು ಮಾಡಿಕೊಂಡಿದ್ದೇನೆ.

4. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಪ್ರತಿ ಕರ್ಮವನ್ನು ಶ್ರೇಷ್ಠವಾಗಿ, ಕಲಾತ್ಮಕವಾಗಿ ಮಾಡಿಕೊಂಡಿರುವ 16 ಕಲಾ ಸಂಪೂರ್ಣ ಸ್ವರೂಪ.

5. ನಾನು ಸರ್ವ ಗುಣಗಳನ್ನು ಧಾರಣೆ ಮಾಡಿ, ಸ್ವತಹವಾಗಿ 16 ಕಲಾ ಸಂಪೂರ್ಣವಾಗಿ ತಯಾರಾಗಿದ್ದೇನೆ.